ರಾಷ್ಟ್ರದಲ್ಲೇ ಮೊದಲ ಬಾರಿಗೆ ಭೂ ಸುಧಾರಣೆ ಕಾಯ್ದೆಯನ್ನು ಮತ್ತು ಖಾಸಗಿಯವರ ಹಿಡಿತದಲ್ಲಿದ್ದ ಶಿಕ್ಷಣ ದೊರೆಯುವಂತೆ ಮಾಡುವಲ್ಲಿ ಮುಂದಾದರು, ಇ.ಎಂ.ಎಸ್. ರವರು 1962-64 ಮತ್ತು 1967-69 ರವರೆಗೆ ಮುಖ್ಯ ಮಂತ್ರಿಯಾಗಿ ಪುನರ್ ಆಯ್ಕೆಯಾದರು.

ಕೇಂದ್ರ - ರಾಜ್ಯಗಳ ಸಂಬಂಧಗಳು ಫೆಡರಲ್ ತತ್ವದ ಆಧಾರದಲ್ಲಿ ಪುನರ್ ರೂಪುಗೊಳ್ಳಲು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಪ್ರತಿಪಾದಿಸಿದ ಪ್ರಥಮ ಮುಖ್ಯಮಂತ್ರಿ - ಇ.ಎಂ.ಎಸ್.

ಅದರಂತೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಆರ್ಟಿಕಲ್ - 356 ರ ಪ್ರಕಾರ ವಜಾ ಆದ ಒಂದು ರಾಜ್ಯ ಸರ್ಕಾರವೂ ಇ.ಎಂ.ಎಸ್ ರಷ್ಟೇ ಆಗಿತ್ತು.

ಅನೇಕ ದಶಕಗಳ ಕಾಲ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ, ನಿಧನದವರೆವಿಗೂ ಸಿಪಿಐ(ಎಂ)ನ ಪೋಲೀಸ್ ಬ್ಯೂಕಿರೋ ಸದಸ್ಯರಾಗಿದ್ದರು. ಮಹಾತ್ಮಾಗಾಂಧೀಜಿ, ಜವಹರಲಾಲ್ ನೆಹರೂ, ಜಯಪ್ರಕಾಶ್, ನಾರಾಯಣ್ ರಂತಹವರ ಒಡನಾಡಿಯಾಗಿದವರು ಇ.ಎಂ.ಎಸ್. ರವರು. ದಿವಂಗತ ಇ.ಎಂ.ಎಸ್. ರವರ ಕೊಡುಗೆ ಕೇವಲ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ, ಸಾಹಿತ್ಯ ಸಾಂಸ್ಕೃತಿಕ ತತ್ವಶಾಸ್ತ್ರ, ಇತಿಹಾಸ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಅಗಾಧವಾದ ಪಾಂಡಿತ್ಯ ಹೊಂದಿ ಬಹುಮುಖಿ ಕೊಡುಗೆ ನೀಡಿದ್ದಾರೆ, ಹಲವಾರು ವಿದ್ವತ್ ಪೂರ್ಣ ಗ್ರಂಥಗಳನ್ನು ರಚಿಸಿದ್ದಾರೆ ಅನೇಕ ಪತ್ರಿಕೆಗಳಿಗೆ ವಿಚಾರಧಾರೆ ಹಂಚಿದ್ದಾರೆ, ಅವರ ಅತ್ಯಂತ ಸರಳ ಜೀವನ, ಸರ್ವವನ್ನು ಸಮಾಜಕ್ಕೆ ಒಪ್ಪಿಸಿಕೊಂಡ ಅವರ ಅಸುಪಮ ತ್ಯಾಗ, ವಿವಿಧ ಕ್ಷೇತ್ರಗಳಲ್ಲಿ ಆಳ ಮತ್ತು ಅಪಾರವಾದ ಪಾಂಡಿತ್ಯ ಅವರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಒಯ್ದಿದೆ.

ಇ.ಎಂ.ಎಸ್ ರವರು ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳನ್ನು ಬಿಟ್ಟು ಅಗಲಿದ್ದಾರೆ.

ಇಂತಹ ಮಹಾಚೇತನ, ಮಾರ್ಗದರ್ಶನ ವ್ಯಕ್ತಿತ್ವದ ಇ.ಎಂ.ಎಸ್. ರವರು ನಮ್ಮನ್ನು ಅಗಲಿದ್ದು ನಿಜಕ್ಕೂ ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಈ ಸದನವು ಆ ದು:ಖದಲ್ಲಿ ಭಾಗಿಯಾಗಿ ಅಗಲಿದ ಹಿರಿಯ ಮತ್ಸದ್ದಿ ಇ.ಎಂ.ಎಸ್. ರವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

(2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರಿನ ಕಬ್ಬನ್ ಉದ್ಯಾನವನ ಅಭಿವೃದ್ಧಿ

61(240) ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಬ್ಬನ್ ಉದ್ಯಾನವನ ಯಾವಾಗ ಹಾಗೂ ಯಾರಿಂದ ನಿರ್ಮಾಣ ಮಾಡಲಾಯಿತು?

ಆ) ಅಂದು ಕಬ್ಬನ್ ಉದ್ಯಾನವನ ವಿಸ್ತೀರ್ಣ ಎಷ್ಟು ಇತ್ತು ಹಾಗೂ ಇಂದು ಇರುವ ವಿಸ್ತೀರ್ಣ ಎಷ್ಟು ?

ಇ) ಮಾನ್ಯ ನ್ಯಾಯಮೂರ್ತಿಗಳ ಆದೇಶದಂತೆ ಕಬ್ಬನ್ ಉದ್ಯಾನವನವನ್ನು ರಕ್ಷಿಸಲು ಹಾಗೂ ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಕಬ್ಬನ್ ಉದ್ಯಾನವನವನ್ನು 1870 ರಲ್ಲಿ ಚೀಫ್ ಕಮೀಷನರ್ ಎಲ್. ಬೌರಿಂಗ್‌ರವರಿಂದ ನಿರ್ಮಾಣ ಮಾಡಲಾಯಿತು.

ಆ) ಕಬ್ಬನ್ ಉದ್ಯಾನವನದ ವಿಸ್ತೀರ್ಣವು ಅಂದು ಸುಮಾರು 300 ಎಕರೆಗಳಷ್ಟು ಇತ್ತು. ಆದರೆ ಅನೇಕ ಸರ್ಕಾರಿ ಹಾಗೂ ಖಾಸಗಿ ಕಟ್ಟಡಗಳ ನಿರ್ಮಾಣದಿಂದಾಗಿ ಈ ಉದ್ಯಾನವನದ ವಿಸ್ತೀರ್ಣವು ಇಂದು 240 ಎಕರೆಗಳಷ್ಟಿದೆ

ಇ) 1) ಉದ್ಯಾನವನದ ರಕ್ಷಣೆಗಾಗಿ ಇಲಾಖೆಯ ನೌಕರರನ್ನು ಹಗಲು ಮತ್ತು ರಾತ್ರಿ ವೇಳೆಯಲ್ಲಿ ನೇಮಿಸಲಾಗಿದೆ. ಮತ್ತು ಪೋಲೀಸ್ ಇಲಾಖೆಯಿಂದಲೂ ಪೋಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿದ್ದು. ಪೋಲೀಸ್‌ರವರು ಕಬ್ಬನ್ ಉದ್ಯಾನವನದ ರಕ್ಷಣೆಗಾಗಿ ಸೈಕಲ್‌ಗಳು ಹಾಗೂ ಕುದುರೆ ಮೇಲೆ ಸವಾರಿ ಮಾಡುತ್ತಾ ಉದ್ಯಾನವನದ ಎಲ್ಲಾ ಕಡೆಗಳಲ್ಲೂ ರಕ್ಷಣೆಗೆ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಉಸ್ತುವಾರಿ ವಹಿಸುತ್ತಿದ್ದಾರೆ.

2) ಉದ್ಯಾನವನದಲ್ಲಿರುವ ಎಲ್ಲಾ ನೀರಿನ ಕೊಳಗಳನ್ನು ಪುನರ್ ನಮೀಕರಿಸಲಾಗಿದೆ.

3) ಸಸ್ಯ ಗಣತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

4) ಉದ್ಯಾನವನದಲ್ಲಿ ಲಭ್ಯವಿರುವ ಇಲ್ಲಾ ಕಡೆಗಳಲ್ಲಿ ವೈಜ್ಞಾನಿಕವಾಗಿ ಹೊಸದಾಗಿ ಸಸಿಗಳನ್ನು ನಾಟ ಮಾಡಲಾಗಿದೆ.

5) ರೋಗ ಮತ್ತು ಕೀಟಗಳ ಬಾದೆಗಳಿಗೆ ಒಳಗಾಗಿರುವ ಮರ- ಗಿಡಗಳಿಗೆ ಅಗತ್ಯವಾದ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

6) ಸಾರ್ವಜನಿಕರು ಓಡಾಡಲು ಅನುಕೂಲವಾಗುವಂತೆ ಕಾಲುದಾರಿಗಳನ್ನು ನಿರ್ಮಾಣ ಮಾಡಲಾಗಿದೆ.

7) ಉದ್ಯಾನವನಕ್ಕೆ ಹೊರಗಿನಿಂದ ಕಸಕಡ್ಡಿ ಹಾಗೂ ಇತರೆ ಅನುಪಯುಕ್ತ ವಸ್ತುಗಳನ್ನು ತಂದು ಹಾಕದಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿದೆ.

8) ಉದ್ಯಾನ ವನದಲ್ಲಿರುವ ಎಲ್ಲಾ ವಿದ್ಯುತ್ ದೀಪಗಳು ಸರಿಯಾಗಿ ಉರಿಯುವಂತೆ ಕ್ರಮ ಕೈಗೊಳ್ಳಲಾಗಿದೆ.

9) ಹುಲ್ಲು ಹಾಸುಗಳನ್ನು ಹಸಿರಾಗಿಡಲು ತುಂತುರು ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

10) ಮಣ್ಣು ಕೊರೆದು ಹೋಗದಂತೆ ಅಗತ್ಯವಿರುವ ಕಡೆಗಳಲ್ಲಿ ಬದುಗಳನ್ನು ಹಾಕಿಸಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

11) ಉದ್ಯಾನವನದ ಒಳಕ್ಕೆ ವಾಹನ ಸಂಚಾರವನ್ನು ಬೆಳಿಗ್ಗೆ 5.00 ರಿಂದ ಬೆಳಗ್ಗೆ 8.00 ಗಂಟೆಯವರೆಗೆ ನಿಷೇದಿಸಿ ಕ್ರಮಕೈಗೊಳ್ಳಲಾಗಿದೆ.

12) ಉದ್ಯಾನವನದ ಪ್ರವೇಶ ದ್ವಾರಗಳಲ್ಲಿ ಶಾಶ್ವತವಾದ ಗೇಟುಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ.

13) ಉದ್ಯಾನವನದಲ್ಲಿ ಸ್ವಚ್ಛತೆ ಕಾಪಾಡಲು ಮತ್ತು ಮರ ಗಿಡಗಳಿಗೆ ಹಾನಿ ಮಾಡದಂತೆ ತಿಳುವಳಿಕೆ ನೀಡುವ ಸಲುವಾಗಿ ಉದ್ಯಾನವನದಲ್ಲಿ ಸೂಕ್ತ ಜಾಗಗಳಲ್ಲಿ ನಾಮಪಲಕಗಳನ್ನು ಹಾಕಲಾಗಿದೆ

14) ಉದ್ಯಾನವನದ ಸೌಂದರ್ಯವನ್ನು ಮತ್ತು ಅಂದವನ್ನು ಹೆಚ್ಚಿಸುವ ಸಲುವಾಗಿ ನಿಷ್ಕ್ರೀಯವಾಗಿದ್ದ ಕಾರಂಜಿಗಳನ್ನು ಪುನಶ್ಚೇತಗೊಳಿಸಲಾಗಿದೆ.

15) ಸಾರ್ವಜನಿಕರ ಉಪಯೋಗಕ್ಕಾಗಿ ಶೌಚಾಲಯವನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ.

16) ಉದ್ಯಾನವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಆಕರ್ಷಣೀಯವಾಗಿ ಮಾಡುವ ಉದ್ದೇಶದಿಂದ ಸರ್ಕಾರಿ ಹಾಗೂ ಖಾಸಗಿ ಮತ್ತು ಸ್ವಯಂಸೇವಾ ಸಂಘಗಳು ಭಾಗವಹಿಸುವಂತೆ ಕ್ರಮಕೈಗೊಳ್ಳಲಾಗಿದೆ.

17) ಉದ್ಯಾನವನದಲ್ಲಿ ಅನಧಿಕೃತ ಕಟ್ಟಡಗಳನ್ನು ಕಟ್ಟದಂತೆ ಕ್ರಮಕೈಗೊಳ್ಳಲಾಗಿದೆ.

18) ಉದ್ಯಾನವನದಲ್ಲಿ ಡೀಸಲ್ ವಾಹನಗಳು ಪ್ರವೇಶಿಸದಂತೆ ನಿರ್ಬಂದವಹಿಸಲಾಗಿದೆ.

19) ಉದ್ಯಾನವನದಲ್ಲಿ ಸಭೆ, ಸಮಾರಂಭಗಳು ಮತ್ತು ದರಣಿಗಳನ್ನು ನಡೆಸದಂತೆ ಕ್ರಮಕೈಗೊಳ್ಳಲಾಗಿದೆ.

20) ಉದ್ಯಾನವನದಲ್ಲಿ ಅಲ್ಲಲ್ಲಿ ಕಿತ್ತುಹೋಗಿರುವ ಬೇಲಯನ್ನು ದುರಸ್ಥಿಪಡಿಸಲಾಗಿದೆ.

21) ಉದ್ಯಾನವನದಲ್ಲಿ ಸ್ವಚ್ಛತೆ ಕಾಪಾಡಲು ಅಗತ್ಯವಿರುವ ಕಡೆಗಳಲ್ಲೆಲ್ಲಾ ಕಸದ ಬುಟ್ಟಿಗಳನ್ನು ಇಡಲಾಗಿದೆ

22) ಉಚ್ಚ ನ್ಯಾಯಾಲಯದ ಪೂರಕ ಕಟ್ಟಡದ ಮುಂಭಾಗದಲ್ಲಿ ಹೊಸದಾಗಿ ಉದ್ಯಾನವನ್ನು ನಿರ್ಮಿಸಿ ಸುಂದರಗೊಳಿಸಲಾಗಿದೆ.

23) ಕಬ್ಬನ್ ಉದ್ಯಾನವನದ ಸುತ್ತಲೂ ಖಾಯಂ ಕಾಂಪೌಂಡ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನ್ಯಾಯಮೂರ್ತಿಗಳ ನಿರ್ದೇಶನದ ಮೇಲೆ ದೀರ್ಘವಾದ ಉತ್ತರವನ್ನು ನೀಡಿ, ಸುಮಾರು 23 ಕೆಲಸಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಬೆಂಗಳೂರು ಮಹಾನಗರಕ್ಕೆ ಈ ಕಬ್ಬನ್ ಪಾರ್ಕ್ ಬಹು ದೊಡ್ಡ ಪ್ರಮಾಣದಲ್ಲಿ ಆಮ್ಲಜನಕವನ್ನು ಉತ್ಪಾದನೆ ಮಾಡತಕ್ಕಂಥ ಒಂದು ಕಾರ್ಖಾನೆ ಎಂದು ಹೇಳಬಹುದು. ಕಟ್ಟಡಗಳು ಬಂದು ಸುಮಾರು 300 ಎಕರೆಗಳಿಂದ 240 ಎಕರೆಗಳವರೆಗೆ ಕಡಿಮೆಯಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ ಮತ್ತು ರಾತ್ರಿಯ ಹೊತ್ತು ಲಾರಿಯಲ್ಲಿ ಬಂದು ಪ್ರತಿನಿತ್ಯ ಸುಮಾರು 10-15 ಮರಗಳನ್ನು ಕಡಿಯುತ್ತಿದ್ದಾರೆ ಎಂದಿದ್ದಾರೆ. ಈ ರೀತಿ ಮರಗಳನ್ನು ಕಡಿಯುತ್ತಿರುವುದರ ಮತ್ತು ಉಳಿಸುವುದರ ಬಗ್ಗೆ ಇವತ್ತು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಸಸ್ಯ ಗಣತಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ, ಯಾವಾಗ ಈ ಸಸ್ಯ ಗಣತಿಯನ್ನು ಸಂಪೂರ್ಣ ಮಾಡುತ್ತೀರಿ ಅಥವಾ ಎಷ್ಟೋ ಮರಗಳನ್ನು ಕಳೆದುಕೊಂಡ ಮೇಲೆ ಸಸ್ಯ ಗಣತಿ ಸಂಪೂರ್ಣ ಆಗುತ್ತದೆಯೆ ಮತ್ತು ಕಬ್ಬನ್ ಪಾರ್ಕ್ ನಿರ್ವಾಹಣೆಗೆ ವಾರ್ಷಿಕ ಖರ್ಚು ಎಷ್ಟು ಆಗುತ್ತದೆ? ದಯವಿಟ್ಟು ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು, ಮೊಟ್ಟಮೊದಲನೆಯದಾಗಿ ಅನಧಿಕೃತ ಕಟ್ಟಡಗಳನ್ನು ಕಟ್ಟಲಾಗುತ್ತಿದೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ವಿಧಾನಸೌಧ, ರಾಜಭವನ ಜಿ.ಪಿ.ಓ., ಶಾಸಕರ ಭವನ ಮತ್ತು ಸುದರ್ಶನ್ ಗೆಸ್ಟ್ ಹೌಸ್, ಸರ್ಕಾರಿ ಕಛೇರಿಗಳೆಲ್ಲವೂ ಕೂಡ ಕಬ್ಬನ್ ಪಾರ್ಕ್ ಜಾಗದಲ್ಲೇ ಇವೆ. ಆದುದರಿಂದ ಅನಧಿಕೃತ ಕಟ್ಟಡಗಳು ಕಟ್ಟುವುದಕ್ಕೆ ಎಲ್ಲಿಯೂ ಅವಕಾಶ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಹೈಕೋರ್ಟಿನ ಅನೆಕ್ಸ್ ಕಟ್ಟಡ ಕಟ್ಟಿರುವುದು ಅನಧಿಕೃತವಾಗಿಯೇ, ಈ ರೀತಿಯ ದೊಡ್ಡ ಕಟ್ಟಡವನ್ನು ಕಬ್ಬನ್ ಪಾರ್ಕ್‌ಲ್ಲಿ ಹೇಗೆ ಕಟ್ಟಲಾಯಿತು?

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೆ, ಈ ಕಟ್ಟಡವನ್ನು ನಿಯಮಾನುಸಾರ ಕಟ್ಟಲಾಗಿದೆ. ಇದು ಅನಧಿಕೃತ ಕಟ್ಟಡ ಅಲ್ಲ. ಅನಧಿಕೃತವಾಗಿ ಯಾರಾದರೂ ಕಟ್ಟಿದ್ದರೆ ಹೇಳಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಮರಗಳನ್ನು ಕಡಿಯುತ್ತಿದ್ದಾರೆಂದು ಹೇಳಿದ್ದಾರೆ, ಹಿಂದೆ ಇತ್ತು. ಈಗ ಸುಮಾರು ಎರಡು ವರ್ಷಗಳಿಂದ ಬಾಂಬೂಗಳನ್ನು ಅಥವಾ ಮರಗಳನ್ನು ನಮಗೆ ಕಾಣಿಸದೆ ಕಡಿಯುವವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಅವರನ್ನು ಹಿಡಿಯುವುದಕ್ಕೆ ಕೇಸ್ ಬುಕ್ ಮಾಡಲಾಗಿದೆ. ಎರಡು ವರ್ಷಗಳಿಂದೀಚೆಗೆ ಮರಗಳನ್ನು ಕಡಿಯತಕ್ಕಂಥ ದೂರುಗಳು ಬಂದಿಲ್ಲ. ಉದ್ಯಾನವನದ ರಕ್ಷಣೆಗಾಗಿ ಹೆಚ್ಚಿನ ಪೋಲೀಸ್‌ನವರನ್ನು ಮತ್ತು ಮಫಿಯಲ್ಲಿ ಹಗಲು ಮತ್ತು ರಾತ್ರಿ ವೇಳೆಯಲ್ಲಿ ಗಸ್ತು ತಿರುಗುವುದಕ್ಕೆ ನೇಮಿಸಲಾಗಿದೆ. ಕಬ್ಬನ್ ಪಾರ್ಕ್ ಹಿಂದೆ ಹೇಗೆ ಇತ್ತು ಅದೇ ರೀತಿಯಲ್ಲಿ ಬಹಳ ಉತ್ತಮವಾಗಿ ಅಭಿವೃದ್ಧಿ ಪಡಿಸುತ್ತಿದ್ದೇವೆ.

ನಾನು ಬಂದ ಮೇಲೆ ಮೂರು ಸಾವಿರದ ಐದು ನೂರು ಗಿಡಗಳನ್ನು ಹಾಕಿಸಿದ್ದೇನೆ. ಕಣ್ಣಾರೆ ನೀವು ಕೂಡ ಹೋಗಿ ನೋಡಬಹುದು. ಆ ಗಿಡಗಳ ವಯಸ್ಸು ಹೇಳುತ್ತದೆ. ಆ ಗಿಡಗಳನ್ನು ನಾನು ಬಂದ ಮೇಲೆ ಹಾಕಿಸಿದ್ದೇನೆ. ಬೆಳಗ್ಗೆ ಸಮಯ ಏನು ವಾಕಿಂಗ್ ಜನ ಬರುತ್ತಿದ್ದರು ಅಂತಹವರಿಗೆಲ್ಲಾ ತೊಂದರೆ ಆಗುತ್ತಿತ್ತು. ಅದನ್ನು ಕೂಡ ನಾವು ನಿಲ್ಲಿಸಿದ್ದೇವೆ. ಇವತ್ತು ಕಬ್ಬನ್ ಪಾರ್ಕ್ ಮೊದಲಿಗಿಂತಲೂ ಉತ್ತಮವಾದ ಸ್ಥಿತಿಯಲ್ಲಿದೆ. ಇನ್ನೂ ಕೂಡ ಅಭಿವೃದ್ಧಿ ಮಾಡಬೇಕು. ಅದಕ್ಕೋಸ್ಕರ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನ ಆಗಿದೆ. ಖಾಸಗಿ ಸಂಸ್ಥೆಗಳು ಅಥವಾ ಸರ್ಕಾರಿ ಸಂಸ್ಥೆಗಳು ಯಾವುದಾದರೂ ಒಂದು ಭಾಗವನ್ನು ನಾವು ನಿರ್ವಹಣೆ ಮಾಡುತ್ತೇವೆಂದು ಮುಂದೆ ಬಂದರೂ ಅವರಿಗೂ ಕೂಡ ಕೊಡೋಣ ಎಂದು ನಾವು ತೀರ್ಮಾನ ಮಾಡಿದ್ದೇವೆ. ಈಗ ಪುಷ್ಪಾ ಆರ್ಟ್ಸ್ ಎನ್ನುವ ಸಂಸ್ಥೆಗೆ ಸೌರಶಕ್ತಿಯ ವಿದ್ಯುತ್ ಸೌಲಭ್ಯವನ್ನು ಒದಗಿಸುವುದಕ್ಕೆ ಸರ್ಕಾರ ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇವೆ. ಅದೇ ರೀತಿ ನಮ್ಮ ಕಬ್ಬನ್ ಪಾರ್ಕ್‌ಗೆ ಯಾವುದೇ ರೀತಿ ತೊಂದರೆ ಆಗದೇ ಅದನ್ನು ಅಳವಡಿಸಿಕೊಳ್ಳಬೇಕೆಂದು ಮಾಡಿದ್ದೇವೆ. ಈಗ ವಿಜಯ ಮಲ್ಯ ಅಂಥ ಅವಕಾಶವನ್ನು ಕೇಳುತ್ತಿದ್ದಾರೆ. ಹಾಗೆಯೇ ಹೆಚ್. ಎಂ. ಟಿ. ಯವರು ಕೇಳುತ್ತಿದ್ದಾರೆ. ಸೆಂಚುರಿ ಕ್ಲಬ್‌ನವರು ಕೇಳುತ್ತಿದ್ದಾರೆ. ಅವರುಗಳು ಒಂದು ಭಾಗವನ್ನು ನಾವು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದ್ದಾರೆ. ಕ್ಯಾಬಿನೇಟ್ ತೀರ್ಮಾನ ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕಬ್ಬನ್ ಪಾರ್ಕಿನಲ್ಲಿ ಈಗ ಸಾಧಿಸಿರುವ ಪ್ರಗತಿ ಬಹಳ ತೃಪ್ತಿಕರ ಎಂದು ಹೇಳುವುದಾದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಕಬ್ಬನ್ ಪಾರ್ಕ್ ಪರಿಸ್ಥಿತಿ ಯಾವ ರೀತಿ ಕುಲಗೆಟ್ಟು ಹೋಗಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ.

ಹೈಕೋರ್ಟ್ ಆದೇಶ ಬರದಿದ್ದರೆ ಇನ್ನೂ ಕುಲಗೆಟ್ಟು ಹೋಗುತ್ತಿತ್ತು. ನಾನು ಸರ್ಕಾರದವರಲ್ಲಿ ಕೇಳುವುದೇನೆಂದರೆ ನಾವು ಇನ್ನೊಂದು ಕಬ್ಬನ್ ಪಾರ್ಕ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕಬ್ಬನ್ ಪಾರ್ಕ್‌ನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಶಾಶ್ವತವಾದ ಒಂದು ಸಮಿತಿಯನ್ನು ರಚನೆ ಮಾಡಲು ಯೋಜನೆ ಮಾಡುತ್ತದೆಯೆ ಈಗ ಒಂದು ಸಮಿತಿ ಇದೆ. ಸಂಬಳ ಪಡೆಯುವ ಅಧಿಕಾರಿಗಳಿಂದ ಈ ಕಬ್ಬನ್ ಪಾರ್ಕ್ ಉಳಿಯುವುದಿಲ್ಲ. ಹಸಿರು ವನವನ್ನು ಉಳಿಸಿಕೊಳ್ಳಬೇಕು ಎನ್ನುವಂತಹ ವ್ಯಕ್ತಿಗಳಿಂದ ಮಾತ್ರ ಉಳಿಯುತ್ತದೆ. ಆದ್ದರಿಂದ ಒಂದು ಶಾಶ್ವತವಾದ ಸಮಿತಿ ಮಾಡಿ ಅದರಲ್ಲಿ ಭೂ ವಿಜ್ಞಾನಿಗಳು, ಹಾರ್ಟಿಕಲ್ಚರ್ ಎಕ್ಸ್‌ಪರ್ಟ್ಸ್, ವಾಟರ್ ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ಸ್ ಈ ವ್ಯಕ್ತಿಗಳು ಯಾರು ಇದ್ದಾರೆ ಅವರು ಇದರ ಬಗ್ಗೆ ಗಮನ ಕೊಡಬಹುದು. ಆ ತರಹದ ಒಂದು ಶಾಶ್ವತವಾದ ಸಮಿತಿ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೆ? ತಾವು ಮಲ್ಯ ಅವರು, ಸೆಂಚುರಿ ಕ್ಲಬ್ ರವರು ಅವಕಾಶ ಕೇಳಿದ್ದಾರೆ ಎಂದು ಹೇಳಿದ್ದೀರಿ. ಮಲ್ಯ ಅವರು ಏನು ಮಾಡಿದ್ದಾರೆ ಎಂದು ನಮಗೆ ಗೊತ್ತಿದೆ. ಟಿಫಾನೀಸ್ ಹತ್ತಿರ ಒಂದು ಪಾರ್ಕ್‌ನ್ನು ತಮ್ಮ ಸ್ವಂತಕ್ಕೆ ಮಾಡಿಕೊಂಡಿದ್ದು ಗೊತ್ತಿದೆ. ಸ್ವಯಂ ಸೇವಾ ಸಂಸ್ಥೆಗಳನ್ನು, ಶಾಲಾ ಕಾಲೇಜು ಮಕ್ಕಳನ್ನು, ಇದರಲ್ಲಿ ತೊಡಗಿಸಿ ಅವರಿಂದ ಗಿಡ ನೆಟ್ಟು ಕಬ್ಬನ್ ಪಾರ್ಕ್‌ನ್ನು ಚೆನ್ನಾಗಿ ನೋಡಿಕೊಳ್ಳುವುದಕ್ಕೆ ಯೋಚನೆ ಮಾಡುತ್ತಿರಾ? ಮೂರನೇಯದು, ಕಬ್ಬನ್ ಪಾರ್ಕ್‌ಗೆ ಇವೊತ್ತು ಯಾವುದೇ ರೀತಿಯ ಗೋಡೆ ಇಲ್ಲ. ನೀವು ಗೇಟ್ ಹಾಕುತ್ತೇವೆಂದು ಹೇಳಿದ್ದೀರೆ, ಆ ಗೋಡೆ ಇಲ್ಲದೇ ಇರುವುದರಿಂದ ಯಾರಾದರೂ ಒಬ್ಬರು ರಾತ್ರಿ ವೇಳೆ ಲಾರಿಯಲ್ಲಿ ಡೆಬರೀಸ್ ತಂದು ಡೆಂಪ್ ಮಾಡಿ ಅಥವಾ ಮರಗಳನ್ನು ಕಡಿದುಕೊಂಡು ಹೋಗುವಂತಹ ಪರಿಸ್ಥಿತಿ ಇದೆ. ಅದಕ್ಕೆ ಶಾಶ್ವತವಾದ ಒಂದು ಗೋಡೆಯನ್ನು ಕಟ್ಟುವುದಕ್ಕೆ ಸರ್ಕಾರ ಯೋಜನೆ ಮಾಡುತ್ತಿದೆಯೇ? ಕೊನೆಯದಾಗಿ ವೆಂಕಟಪ್ಪ ಆರ್ಟ್‌ಗ್ಯಾಲರಿ ಇದೆ. ಅದರ ಸುತ್ತಲೂ ಒಂದು ಮೋಟ್ ಇತ್ತು. ಒಂದು ಝರಿ ನಾವು ಡೆಬರೀಸ್ ಹಾಕಿ ಆ ಝರಿ ಇಲ್ಲದಂತೆ ಮಾಡಿದ್ದೇವೆ. ಹಿಂದೆ ಯೋಜನೆ ಮಾಡಿದಾಗ ಉತ್ತಮವಾದ ಒಂದು ಕಲ್ಪನೆಯಿಂದ ಮಾಡಿದ್ದರು. ಆ ಝರಿಯನ್ನು ಪುನ: ಪುನರ್ ಜನ್ಮ ಮಾಡುವುದಕ್ಕೆ ಏನಾದರೂ ಯೋಜನೆ ಮಾಡುತ್ತದೆಯೇ?

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ನಾನು ಸದಸ್ಯರ ಕಾಳಜಿಯನ್ನು ಪ್ರಶಂಸೆ ಮಾಡುತ್ತೇನೆ. ಕಬ್ಬನ್ ಪಾರ್ಕ್ ಉಳಿಸುವುದರಲ್ಲಿ ಎರಡು ಮಾತಿಲ್ಲ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ತಾವು ಹೇಳಿದಂತೆ ಹಿಂದೆ ಆ ಪರಿಸ್ಥಿತಿ ಇತ್ತು. ಈಗ ಸ್ವಲ್ಪ ಉತ್ತಮಪಡಿಸಿದ್ದೇವೆ. ಉತ್ತಮವಾದ ಕೆಲಸ ಮಾಡಿದಾಗ ಶಹಭಾಸ್ ಗಿರಿ ಕೊಡಿ. ತಾವು ಈಗ ವಿಧಾನ ಸೌಧದ ಮುಂದೆ ನೋಡಿರಬಹುದು. ಹೂವಿನ ಗಿಡಗಳನ್ನು ತುಳಿದು ಹಾಳು ಮಾಡುತ್ತಿದ್ದರು. ಅಲ್ಲಿ ಬೇಲಿ ಹಾಕಿದ್ದೇವೆ. ನಾವು ಮಾಡಿರುವ ಕೆಲಸದ ಬಗ್ಗೆ ಹೇಳಿ ಮಾಡದೇ ಇರುವ ಕೆಲಸದ ಬಗ್ಗೆ ಇದ್ದರೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಮರಿಗೌಡರ ಕಾಲ ಬಿಟ್ಟರೆ ಆಮೇಲೆ ಅಲ್ಲಿ ಏನೂ ಅಭಿವೃದ್ಧಿಯೇ ಆಗಲಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ನಾಳೆ ಬೆಳಗ್ಗೆ ತಾವು ನನ್ನ ಜೊತೆ ವಾಕಿಂಗ್‌ಗೆ ಬನ್ನಿ ನಾನು ತೋರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ಬರುತ್ತಿಲ್ಲ. ನಾನು ದಿನಕ್ಕೆ ಎರಡು ಗಂಟೆ ಅಲ್ಲೇ ಸುತ್ತುವುದು. ನಮ್ಮ ಮಾಜಿ ಅಧ್ಯಕ್ಷರು ಅವರು ಸಿಗುತ್ತಾರೆ. ನನ್ನ ಜೊತೆಯಲ್ಲಿ ಪ್ರತಿದಿನ ಅನೇಕ ಜನ ಸಿಗುತ್ತಾರೆ. ನಿಮ್ಮನ್ನು ನಾನು ನೋಡಿಯೇ ಇಲ್ಲ. ನಾನು ಪ್ರತಿದಿನ 6 ಗಂಟೆಗೆ ಬಂದರೆ 8ಗಂಟೆಯವರೆಗೂ ಪ್ರತಿ ಮರ ಮರ ಸುತ್ತಿಕೊಂಡು ಬರುತ್ತೇನೆ. ತಾವು ಎಂದೂ ಬಂದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ಅವರ ಮಾತಿಗೆ ನಾನು ಸರಿಯಾದ ಉತ್ತರ ಕೊಡಬೇಕಾಗುತ್ತದೆ. ಇಷ್ಟು ಬೇಜವಾಬ್ದಾರಿತನದಿಂದ ಅವರು ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಬೇಜವಾಬ್ದಾರಿ ಮಂತ್ರಿಗಳು ಇವರು. ಜವಾಬ್ದಾರಿ ಇರುವ ಮಂತ್ರಿಗಳೇ ಇವರು? ಇವರು ರಾಜೀನಾಮೆ ಕೊಡಬೇಕು. ಬೇಜವಾಬ್ದಾರಿ ಮಾತು ಎಂದು ಹೇಳುತ್ತಾರೆ.

ಶ್ರೀ ಡಿ.ಟಿ. ಜಯಕುಮಾರ್:- ಹೌದು ತಾವು ಬೇಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೀರಿ. ಏನೂ ಮಾಡಿಲ್ಲ ಎಂದು ಮರಿಗೌಡರ ಕಾಲದಲ್ಲಿ ಅಭಿವೃದ್ಧಿ ಆಗಿದ್ದು ಬಿಟ್ಟರೆ ಬೇರೆ ಅಭಿವೃದ್ಧಿಯೇ ಆಗಿಲ್ಲ ಅಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯರು ಸುಳ್ಳು ಹೇಳುತ್ತಿದ್ದಾರೆ. ನಾನು ಪ್ರತಿದಿನ ವಾಕಿಂಗ್ ಹೋಗುತ್ತೇನೆ. ತಾವೆಲ್ಲಿ ಬರುತ್ತಿದ್ದೀರಿ? ನಾನು ಬೇಕಾದರೆ ಒಂದು ಸಾವಿರ ಜನರ ಸಾಕ್ಷಿ ಕೊಡುತ್ತೇನೆ. ನೀವು ಬರುವುದು ಒಬ್ಬರಿಗೂ ಗೊತ್ತಿಲ್ಲ. ಏನು ಬೇಜವಾಬ್ದಾರಿ ಮಾತು ಮಾತನಾಡುತ್ತಿದ್ದೀರಿ. ಇಡೀ ಕಬ್ಬನ್ ಪಾರ್ಕ್ ಹಾಳಾಗಿ ಹೋಗಿದೆ, ರಾಜ್ಯದ ತೋಟಗಾರಿಕೆ ಇಲಾಖೆ ಹಾಳಾಗಿ ಹೋಗಿದೆ. ಏನು ಮಾತನಾಡುತ್ತಿದ್ದೀರಿ ನೀವು?

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಒಂದು ತಿಂಗಳು ಆಗಿಲ್ಲ. ನಾವು ವಿಧಾನ ಸೌಧದ ಮುಂದೆ ಗ್ಯಾಲರಿ ಹಾಕಿಸಿದ್ದೇವೆ. ಮತ್ತು ವಿಧಾನ ಸೌಧ ಎಂದು ಅಕ್ಷರದಲ್ಲಿ ಬರೆಯುವಂತಹ ಒಂದು ಪ್ರಕ್ರಿಯೆ ನಡೆಯುತ್ತಿದೆ. ಕೋರ್ಟ್ ಮುಂದೆ ಇರತಕ್ಕಂಥ ಪಾರ್ಕ್‌ನ್ನು ಸ್ವಲ್ಪ ದಯವಿಟ್ಟು ನೋಡಿ. ಅಲ್ಲಿ ಮಾನ್ಯ ನ್ಯಾಯಾಧೀಶರಾದ ಸಾಲ್ಯಾನ ಅವರನ್ನು ಕರೆದುಕೊಂಡು ಬಂದು ಸುಮಾರು 30-40 ಗಿಡಗಳನ್ನು ನೆಟ್ಟಿದ್ದೇವೆ. ನಾವು ಸುಮಾರು ಮೂರುವರೆ ಸಾವಿರ ಗಿಡಗಳನ್ನು ನೆಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಕಬ್ಬನ್ ಪಾರ್ಕ್‌ನಲ್ಲಿ ಇರುವ ನೀರಿನ ಕಾರಂಜಿ ಏನಾಗಿದೆ? ಅದು ಶೌಚಸ್ಥಳವಾಗಿದೆ.

ಶ್ರೀ ಡಿ.ಟಿ. ಜಯಕುಮಾರ್:- ಆಗದೇ ಇರುವುದನ್ನು ಒಪ್ಪಿಕೊಳ್ಳುತ್ತೇವೆ. ಆಗಿರುವುದನ್ನು ಏಕೆ ಇಲ್ಲ ಎಂದು ಹೇಳುತ್ತೀರಿ? ಮಾನ್ಯ ಅಧ್ಯಕ್ಷರೇ, ಏನೂ ಆಗಿಲ್ಲ ಎಂದು ಹೇಳಿದ್ದಾರೆಲ್ಲ? ಅದಕ್ಕೆ ಹೇಳಬೇಕಾಗಿದೆ. ವಾರಕ್ಕೆ ಒಂದು ಸಾರಿ ನಾನು ಕಬ್ಬನ್ ಪಾರ್ಕಿಗೆ ಹೋಗುತ್ತೇನೆ. ಬಾಕಿ ದಿವಸ ಹೆಬ್ಬಾಳದ ಯೂನಿವರ್ಸಿಟಿ ಕಾಲೇಜಿನಲ್ಲಿ ನಾನು ವಾಕ್ ಮಾಡುವುದು. ಅಲ್ಲಿ ವಾಹನಗಳು ಬಂದು ಆಡಚಣೆಯಾಗುತ್ತಿತ್ತು. ನನಗೆ ಸಾಮಾನ್ಯ ಜನ ದೂರುನೀಡಿದರು. ಅದಕ್ಕೆ ಗೇಟ್ ಹಾಕಿ ಕಬ್ಬನ್ ಪಾರ್ಕಿನಲ್ಲಿ 5ಗಂಟೆಯಿಂದ 8ಗಂಟೆಯವರೆಗೂ ಯಾವುದೇ ವಾಹನವನ್ನು ಬಿಡುತ್ತಿಲ್ಲ. ಇವುಗಳೆಲ್ಲ ಏನೂ ಕೇಲಸ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ವಾಹನಗಳನ್ನು ನಿಲ್ಲಿಸಿದ್ದು ನ್ಯಾಯಾಲಯ ಆದೇಶ ಕೊಟ್ಟಮೇಲೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ ಸಮಿತಿ ಮಾಡುವ ಬಗ್ಗೆ ಹಾಗೂ ಕಟ್ಟುವ ಬಗ್ಗೆ ಉತ್ತರ ಕೊಡಲಿ.

ಅಧ್ಯಕ್ಷರು :- ನಾವು 10-15ಕ್ಕೆ ಶುರು ಮಾಡಿದ್ದು 10 ನಿಮಿಷ ಮುಗಿದು ಹೋಯಿತು.

ಶ್ರೀ ಡಿ.ಟಿ. ಜಯಕುಮಾರ್:- ಮಾನ್ಯ ಸದಸ್ಯರು ಹೇಳಿದ ವಿಷಯದ ಕುರಿತು ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್.ರಾಜಣ್ಣ :- ಮಾನ್ಯ ಅಧ್ಯಕ್ಷರೇ,

In 1984-85, there is a clear standing instruction by the Government of Karnataka to protect the playgrounds and parks.

ಆದರೆ ಇವತ್ತು ಬೆಂಗಳೂರು ಸಿಟಿಯಲ್ಲಿ ಕೆರೆ ಕುಂಟೆ ಎಲ್ಲಾ ಮಾಯವಾಗಿದೆ.

ಸುಳ್ಯ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ

62 (243) ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ 3 ವರ್ಷಗಳಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಅಥವಾ ನೆರವು ಎಷ್ಟು (ವರ್ಷವಾರು ವಿವರ ನೀಡುವುದು)

ಆ) ಆ ಪೈಕಿ ವೆಚ್ಚ ಮಾಡಲಾದ ಒಟ್ಟು ಹಣ ಎಷ್ಟು?
(ಜಿಲ್ಲಾವಾರು ವಿವರ ನೀಡುವುದು)

ಇ) ಸುಳ್ಯ ತಾಲ್ಲೂಕಿನಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ. ಹಾಗೂ ಉಳಿಕೆ ಹಣ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) 1994-95 ಮತ್ತು 1995-96ನೇ ವರ್ಷಗಳಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ 1996-97ರಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ 12.64 ಕೋಟಿ ರೂ.ಗಳನ್ನು ರಾಜ್ಯಕ್ಕೆ ಮಂಜೂರು ಮಾಡಿದ್ದು ಈ ಪೈಕಿ 9.48 ಕೋಟಿ ರೂ.ಗಳನ್ನು ಮಂಡಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) 1994-95 ಮತ್ತು 1995-96ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲವಾದ್ದರಿಂದ ಖರ್ಚು ಮಾಡಿರುವುದಿಲ್ಲ. 1996-97ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಂದ ಹಣವನ್ನು ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಡಿ ಒಹೆಚ್7ಎಸ್ ಜಿ ಎಂ 97, ದಿನಾಂಕ: 22-3-97 ರಂದು ಬಿಡುಗಡೆ ಮಾಡಿದ ಕಾರಣ 1996-97ನೇ ಸಾಲಿನಲ್ಲಿ ರಾಜ್ಯದ 184 ಸ್ಲಂಗಳಲ್ಲಿ ತಲಾ 6.75 ಲಕ್ಷದಂತೆ ಮೂಲಭೂತ ಸೌಕರ್ಯ ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಕೆಲಸ ಪ್ರಗತಿಯಲ್ಲಿದೆ ಜಿಲ್ಲವಾರು ವಿವರ ಅನುಬಂಧ- I ರಲ್ಲಿ ಲಗತ್ತಿಸಲಾಗಿದೆ.